ಓ ಎಸ್ ನಂ. 15/2011
ಪಿ .ಡಬ್ಲ್ಯೂಃ 1

ಸಾಕ್ಷಿಯನ್ನು ದಿಃ 09-12-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃ ಶ್ರೀ ಕೆ ಬಿ ಎನ್ ವಕೀಲರಿಂದಃ**

ಮಾನ್ಯ ವಕೀಲರು ಹಾಜರು ಇದ್ದು, 4 ನೇ ಪ್ರತಿವಾದಿ ಪರವಾಗಿ ಮಾಡುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 2(ಎ), 2(ಬಿ) ಮತ್ತು 2(ಸಿ) ಪ್ರತಿವಾದಿಗಳ ಪರಃ ಶ್ರೀ ಎ ಕೆ ಡಿ ವಕೀಲರಿಂದಃ**

2. ಮಾನ್ಯ ವಕೀಲರು ಹಾಜರು ಇದ್ದು, 4 ನೇ ಪ್ರತಿವಾದಿ ಪರವಾಗಿ ಮಾಡುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 3 ನೇ ಪ್ರತಿವಾದಿಯಿಂದಃ**

3. 3 ನೇ ಪ್ರತಿವಾದಿ ಮರಣ ಪಟ್ಟಿದ್ದು, ಅವರ ಹೆಸರನ್ನು ವಾದ ಪತ್ರದಿಂದ ತೆಗೆಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರಃ ಶ್ರೀ ಕೆ ಆರ್ ಡಿ ವಕೀಲರಿಂದಃ**

4. ವಾದ ಪತ್ರವನ್ನು ಬರೆಯಲು ವಕೀಲರಿಗೆ ಮಾಹಿತಿಯನ್ನು ನಾವು ಕೊಟ್ಟಿರುತ್ತೇವೆ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇರುತ್ತದೆ. ನನಗೆ ಓ.ಎಸ್ ನಂಬರ 70/1979 ರ ಪೂರ್ತಿ ಕೇಸಿನ ಮಾಹಿತಿ ಇರುವುದಿಲ್ಲ. ಆದರೆ ಸದರಿ ಕೇಸಿನ ತೀರ್ಪಿನ ಬಗ್ಗೆ ನನಗೆ ಗೊತ್ತಿರುತ್ತದೆ. ನನಗೆ ಸಾಮಾನ್ಯ ಮೊಕ್ತಿಯಾರನಾಮೆಯನ್ನು ಬರೆದುಕೊಟ್ಟ ನಂತರ ನನಗೆ ಗೊತ್ತಿರುವ ಮಾಹಿತಿಯ ಆಧಾರದ ಮೇಲೆ ನಾನು ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ನುಡಿಯುತ್ತಿದ್ದೇನೆ. ನನಗೆ ಸಾಮಾನ್ಯ ಮೊಕ್ತಿಯಾರನಾಮೆಯನ್ನು ಬರೆದುಕೊಡುವ ಮುಂಚೆ ಕೇಸಿನ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ನಮ್ಮ ತಾಯಿ ಸಲ್ಲಿಸಿರುತ್ತಾರೆ. ಹಿಂದಿನ ತೀರ್ಪಿನ ಆಧಾರದ ಮೇಲೆ ನನ್ನ ತಾಯಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ದಾವೆಯನ್ನು ನನ್ನ ತಾಯಿ ತನ್ನ ಪರವಾಗಿ ಮತ್ತು ನಮ್ಮೆಲ್ಲರ ಪರವಾಗಿ ಸಲ್ಲಿಸಿರುತ್ತಾರೆ ಎಂದರೆ ನಿಜ. 1 ನೇ ವಾದಿಯು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲವೆಂದು ಹಾಗೂ ಅವರಿಗೆ ಪ್ರಾಪಂಚಿಕ ಜ್ಞಾನ ಇಲ್ಲ ಎಂದು ವಾದ ಪತ್ರದಲ್ಲಿ ಸುಳ್ಳು ಹೇಳಿ ಬರೆಸಲಾಗಿದೆ ಎಂದರೆ ಸರಿಯಲ್ಲ.

5. 2003 ನೇ ಇಸ್ವಿಯಲ್ಲಿ ನನಗೆ 14 ವರ್ಷ ವಯಸ್ಸಾಗಿತ್ತು. 2003 ನೇ ಸಾಲಿನಲ್ಲಿ 2 ನೇ ವಾದಿ ಶ್ರೀಮತಿ ಲತಿಫಾ ರವರಿಗೆ 22 ವರ್ಷ ವಯಸ್ಸಾಗಿತ್ತು. 2003 ನೇ ಸಾಲಿನಲ್ಲಿ 3 ನೇ ವಾದಿಗೆ 21 ವರ್ಷ ವಯಸ್ಸಾಗಿತ್ತು. 2 ನೇ ವಾದಿಯು 2003 ನೇ ಇಸ್ವಿಯಲ್ಲಿ ಬಿಎ ವ್ಯಾಸಂಗ ಮಾಡುತ್ತಿದ್ದಳು. 2 ನೇ ವಾದಿಯು 2003 ನೇ ಇಸ್ವಿಯಲ್ಲಿ ಬಿಎ ವ್ಯಾಸಂಗವನ್ನು ಮುಗಿಸಿ ಮದುವೆ ಮಾಡಿಕೊಂಡರು. 3 ನೇ ವಾದಿಯು ಎಂಬಿಎ ವ್ಯಾಸಂಗವನ್ನು ಮಾಡಿಕೊಂಡಿದ್ದಾರೆ. ವಾದ ಪತ್ರದಲ್ಲಿ 1 ರಿಂದ 6 ನೇ ವಾದಿಗಳ ವಯಸ್ಸನ್ನು ಕ್ರಮವಾಗಿ 53 ವರ್ಷ, 32 ವರ್ಷ, 31 ವರ್ಷ, 28 ವರ್ಷ, 24 ವರ್ಷ ಮತ್ತು 23 ವರ್ಷವೆಂದು ತೋರಿಸಲಾಗಿದೆ ಎಂದರೆ ನಿಜ. 2003 ನೇ ಇಸ್ವಿಯಲ್ಲಿ 1 ರಿಂದ 6 ನೇ ವಾದಿಗಳ ವಯಸ್ಸು ಕ್ರಮವಾಗಿ 45 ವರ್ಷ, 24 ವರ್ಷ, 23 ವರ್ಷ, 20 ವರ್ಷ, 16 ವರ್ಷ ಮತ್ತು 15 ವರ್ಷ ಇತ್ತು ಎಂದರೆ ನಿಜ. ನಾವು ಸುಳ್ಳು ವ್ಯಾಜ್ಯ ಕಾರಣವನ್ನು ಸೃಷ್ಟಿಸಿ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

6. 2 ಮತ್ತು 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದ ಕಾರಣ ಸದರಿ 2 ಮತ್ತು 3 ನೇ ಪ್ರತಿವಾದಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. 2 ಮತ್ತು 3 ನೇ ಪ್ರತಿವಾದಿಗಳ ಹೆಸರನ್ನು ಕ್ರಯ ಪತ್ರದಲ್ಲಿ ಉಲ್ಲೇಖ ಮಾಡಿದ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ನಾನು ನನ್ನ ವಾದ ಪತ್ರದಲ್ಲಿ 7 ನೇ ಪುಟದ 10 ನೇ ಖಂಡಿಕೆಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದು ನಮೂದು ಮಾಡಿರುತ್ತೇನೆ ಎಂದರೆ ನಿಜ. ನಾವು ಈ ದಾವೆಯನ್ನು ಕೇವಲ ಪಾಲಿಗಾಗಿ ಹಾಕಿರುತ್ತೇವೆ ಎಂದರೆ ನಿಜ. ನಾವು ಈ ದಾವೆಯಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ಕೋರಿ ಪರಿಹಾರವನ್ನು ಕೇಳಿಲ್ಲ ಎಂದರೆ ನಿಜ. ನಮಗೆ 2003 ರಲ್ಲಿ ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದು ಹೇಳಿದ ಕಾರಣ ನಾವು ಈ ದಾವೆಯನ್ನು ಪಾಲಿಗಾಗಿ ಹಾಕಿರುತ್ತೇವೆ. 2 ಮತ್ತು 3 ನೇ ವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲದಿದ್ದ ಕಾರಣ ನಾವು ಸಲ್ಲಿಸಿರುವ ದಾವೆಯು ಕಾನೂನಿನ ಅಡಿಯಲ್ಲಾಗಲಿ ಅಥವಾ ವಸ್ತು ಸ್ಥಿತಿಯಲ್ಲಾಗಲಿ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

7. ಈ ಕೇಸಿನ 2 ನೇ ಪ್ರತಿವಾದಿಯು ಓ ಎಸ ನಂಬರ 70/1979 ರಲ್ಲಿ 3 ನೇ ವಾದಿ ಎಂದರೆ ಅದು ನನಗೆ ಗೊತ್ತಿಲ್ಲ. ಈ ಕೇಸಿನ 3 ನೇ ಪ್ರತಿವಾದಿಯು ಓ ಎಸ ನಂಬರ 70/1979 ರಲ್ಲಿ 2 ನೇ ವಾದಿ ಎಂದರೆ ಅದು ನನಗೆ ಗೊತ್ತಿಲ್ಲ. ನಮ್ಮ ತಂದೆ 2001 ರಲ್ಲಿ ತೀರಿಕೊಂಡ ನಂತರ ನನ್ನನ್ನು ಮತ್ತು ಇತರೇ ವಾದಿಗಳನ್ನು ಆರ.ಎ ನಂಬರ 29/1988 ಮತ್ತು ಆರ.ಎ ನಂಬರ 30/1988 ರಲ್ಲಿ ಪಕ್ಷಗಾರರನ್ನಾಗಿ ಸೇರಿಸಲಾಯಿತು ಎಂದರೆ ನಿಜ. ನಮ್ಮ ತಂದೆಯು ಓ ಎಸ್ ನಂಬರ 70/1979 ರಲ್ಲಿ 6 ನೇ ಪ್ರತಿವಾದಿ ಎಂದರೆ ನಿಜ. ಸದರಿ ದಾವೆಯಲ್ಲಿ ಐದು ಜನ ವಾದಿಯವರು ಇದ್ದರು ಎಂದರೆ ನಿಜ. ಅವರೆಂದರೆ ಅಮಿನಾಬಿ, ಶರಿಫಾಬಿ, ಹವಾಬಿ, ಘಟಿಜಾಬಿ ಮತ್ತು ಕುಸ್ಲುಂಬಿ ಎಂದರೆ ನಿಜ. ಸದರಿ ದಾವೆಯಲ್ಲಿ ವಾದಿಗಳು ನಮ್ಮ ತಂದೆ ವಿರುದ್ಧ ಹಕ್ಕಿಗಾಗಿ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆಗಾಗಿ

ಕೇಳಿಕೊಂಡಿದ್ದರು ಎಂದರೆ ನಿಜ. ಸದರಿ ದಾವೆಯನ್ನು 04.07.1979 ರಂದು ಸಲ್ಲಿಸಲಾಗಿತ್ತು ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಮ್ಮ ತಂದೆಯು ದಾವಾ ಸ್ವತ್ತಿನ ಮೇಲೆ ಕೌಂಟರ ಕ್ಲೇಮನ್ನು ಕೇಳಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು ಎಂದರೆ ನಿಜ.

8. ಈ ದಾವೆಯ ಸ್ವತ್ತುಗಳು ಮತ್ತು ಓ ಎಸ್ ನಂಬರ 70/1979 ರ ಸ್ವತ್ತುಗಳು ಒಂದೇ ಸ್ವತ್ತುಗಳು ಎಂದರೆ ನಿಜ. ಈ ದಾವೆಯ ಪಕ್ಷಗಾರರು ಮತ್ತು ಮತ್ತು ಓ ಎಸ್ ನಂಬರ 70/1979 ರ ಪಕ್ಷಗಾರರು ಒಂದೇ ಆಗಿದ್ದರು ಎಂದರೆ ನಿಜ. ನಮ್ಮ ತಂದೆಯು ಸದರಿ ದಾವೆಯಲ್ಲಿ ತನ್ನ ಕೌಂಟರ ಕ್ಲೇಮನಲ್ಲಿ ಸದರಿ ದಾವೆಯ ವಾದಿಗಳು ದಾವಾ ಹೂಡಿದ ನಂತರ ಪ್ರತಿಬಂಧಕಾಜ್ಞೆಯ ಆಧಾರದ ಮೇಲೆ ಬಲಾತ್ಕಾರವಾಗಿ ದಾವಾ ಆಸ್ತಿಯಲ್ಲಿರುವ ಮನೆ ನಂಬರ 507 ರಲ್ಲಿ ದಿಃ 16.08.1979 ರಂದು ಅಪರಾಧಿಕ ಅಕ್ರಮ ಪ್ರವೇಶ ಮಾಡಿದ್ದರು ಎಂದು ನಿಲುವನ್ನು ತೆಗೆದುಕೊಂಡಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ವಿಚಾರ ಪಕ್ಷಗಾರರನ್ನಾಗಿ ನನಗೆ ಗೊತ್ತಿದ್ದರೂ ಸಹಾ ಅದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ವಜಾಗೊಳಿಸಿ ನಮ್ಮ ತಂದೆಯ ಕೌಂಟರ ಕ್ಲೇಮನ್ನು ಮಾನ್ಯ ಮಾಡಿ ಮನೆ ನಂಬರ 507 ರ ಸ್ವಾಧೀನವನ್ನು ನಮ್ಮ ತಂದೆಗೆ ಹಸ್ತಾಂತರಿಸಬೇಕೆಂದು ಆದೇಶ ಮಾಡಲಾಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ತೀರ್ಪನ್ನು ಪ್ರಶ್ನಿಸಿ ಸದರಿ ದಾವೆಯ ವಾದಿಗಳು ಆರ.ಎ ನಂಬರ 29/1988 ಮತ್ತು ಪ್ರತಿವಾದಿಗಳು ಆರ.ಎ ನಂಬರ 30/1988 ನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆಯ ವಾದಿಗಳು ಸಲ್ಲಿಸಿದ್ದ ಆರ.ಎ ನಂಬರ 29/1988 ನ್ನು ಪುರಸ್ಕರಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹಾ ಮತ್ತು ನಾವು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಆರ.ಎ ನಂಬರ 29/1988 ರ ತೀರ್ಪಿನ ನಂತರ ನಾನಾಗಲಿ, ನನ್ನ ತಂದೆಯಾಗಲಿ ಸ್ವಾಧೀನವನ್ನು ಕೋರಿ ದಾವೆಯನ್ನು ಸಲ್ಲಿಸಿಲ್ಲ. ಇಲ್ಲಿಯ ತನಕ ದಾವಾ ಸ್ವತ್ತಿನ ಸ್ವಾಧೀನವು ಓ.ಎಸ್ ನಂಬರ 70/1979 ರ ವಾದಿಗಳ ಸ್ವಾಧೀನಗಳಲ್ಲಿ ಇರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ಆರ.ಎ ನಂಬರ 30/1988 ಡಿಕ್ರಿ ಆದ ಕಾರಣ ಮತ್ತು ಓ ಎಸ್ ನಂಬರ 70/1979 ರ ವಾದಿಗಳ ದಾವಾ ಸ್ವತ್ತಿನ ಸ್ವಾಧೀನವನ್ನು ಎತ್ತಿ ಹಿಡಿದ ಕಾರಣ ಈ ದಾವೆಯು ಕಾನೂನಿನಡಿ ಮತ್ತು ವಸ್ತು ಸ್ಥಿತಿ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

10. ನಮ್ಮ ತಂದೆಯು ಓ ಎಸ್ ನಂಬರ 70/1979 ರ ವಾದ ಪತ್ರವನ್ನು ಓದಿ ತಿಳಿದುಕೊಂಡು ಕೌಂಟರ ಕ್ಲೇಮನ್ನು ಹಾಕಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ವಾದಿಗಳು ಓ ಎಸ್ ನಂಬರ 70/1979 ರಲ್ಲಿ ಪೂರ್ತಿ ಆಸ್ತಿಗೆ ವಿಭಾಗ ಕೇಳಿದ್ದರೂ ಸಹಾ ನಮ್ಮ ತಂದೆಯು ಕೇವಲ ಮನೆ ನಂಬರ 507 ಕ್ಕೆ ಮಾತ್ರ ಕೌಂಟರ ಕ್ಲೇಮನ್ನು ಕೇಳಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ

ಪೂರ್ತಿ ಸ್ವತ್ತಿನ ಮೇಲೆ ಕೌಂಟರ ಕ್ಲೇಮ್ ಕೇಳಲು ಯಾವುದೇ ಅಡಚಣೆ ಇರಲಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ನಮ್ಮ ತಂದೆಯು ಪೂರ್ತಿ ಸ್ವತ್ತಿಗೆ ಕೌಂಟರ ಕ್ಲೇಮ್ ಕೇಳದಿದ್ದ ಕಾರಣ ಈಗ ನಾವು ಸಲ್ಲಿಸಿರುವ 2 ನೇ ದಾವೆಯು ಊರ್ಜೀತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲಿ, ನನ್ನ ತಂದೆಯಾಗಲಿ ಆರ.ಎ ನಂಬರ 29/1988 ಮತ್ತು ಆರ.ಎ ನಂಬರ 30/1988 ನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ ಎಸ್ ಎ ದಾಖಲು ಮಾಡುವ ಮೂಲಕ ಪ್ರಶ್ನಿಸದ ಕಾರಣ ಸದರಿ ತೀರ್ಪು ಮತ್ತು ಡಿಕ್ರಿಗಳು ಅಂತಿಮವಾಗಿರುತ್ತವೆ ಎಂದರೆ ನಿಜ. ಆದ ಕಾರಣ ನಾವು ಈ ದಾವೆಯನ್ನು ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಊಹಾ ಪೋಹಾದ ಮೇಲೆ ಸುಳ್ಳು ವ್ಯಾಜ್ಯ ಕಾರಣವನ್ನು ಕಲೆ ಹಾಕಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಹಾಕಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯು ಕೌಂಟರ ಕ್ಲೇಮನಲ್ಲಿ ವ್ಯಾಜ್ಯ ಕಾರಣವನ್ನು ದಿಃ 16.08.1979 ಎಂದು ತೋರಿಸಿರುತ್ತಾರೆ ಎಂದರೆ ನಿಜ. ಆದ ಕಾರಣ 40 ವರ್ಷಗಳ ನಂತರ ಯಾವುದೇ ಸಕಾರಣ ಇಲ್ಲದೇ ಹೂಡಿರುವ ದಾವೆಯು ಕಾಲ ಪರಿಮಿತಿಯಿಂದ ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

11. ನಾವು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹಾ, ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಿ ಕಡಿಮೆ ನ್ಯಾಯಾಲಯದ ಶುಲ್ಕವನ್ನು ಭರಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಜಂಟಿ ಸ್ವಾಧೀನದಲ್ಲಿ ಇಲ್ಲದಿರುವ ಕಾರಣ ದಾವಾ ಸ್ವತ್ತಿನ ಮಾರುಕಟ್ಟೆಯ ಬೆಲೆಯ ಮೇಲೆ ನ್ಯಾಯಾಲಯದ ಶುಲ್ಕವನ್ನು ಭರಣ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವ್ಯವಸಾಯೇತರ ಜಮೀನು ಎಂದರೆ ನಿಜ.

12. ನಮ್ಮ ತಂದೆಯು ದಿಃ 16.01.1979 ರಂದು ಅಬ್ದುಲ ಕರಿಂ ರವರ ಜೊತೆ ಒಂದು ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ನಿಜ. ನೊಂದಣಿ ಕ್ರಮ ಪತ್ರ ಆದ ನಂತರ ನಮ್ಮ ತಂದೆಯ ಹೆಸರನ್ನು ಎಂ.ಎ ನಂಬರ ಎ 447 ರ ಪ್ರಕಾರ ಕಂದಾಯದ ದಾಖಲಾತಿಗಳಲ್ಲಿ ನಮೂದು ಮಾಡಲಾಯಿತು ಎಂದರೆ ನಿಜ. ಸದರಿ ಹಕ್ಕು ಬದಲಾವಣೆಯನ್ನು ಪ್ರಶ್ನಿಸಿ ಅಸಲು ದಾವಾ ಸಂಖ್ಯೆ 70/1979 ರ ವಾದಿಗಳು ಉಪ ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ನಿಜ. ಆಗ ಉಪ ವಿಭಾಗಾಧಿಕಾರಿಗಳು ಸದರಿ ಹಕ್ಕು ಬದಲಾವಣೆಯನ್ನು ರದ್ದುಗೊಳಿಸಿದರು ಎಂದರೆ ಅದು ನನಗೆ ಗೊತ್ತಿಲ್ಲ. ತದ ನಂತರ ನಮ್ಮ ತಂದೆಯು ಜಿಲ್ಲಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನಮ್ಮ ತಂದೆಯ ಹೆಸರನ್ನು ದಿನಾಂಕಃ 06.06.1988 ರಂದು ತೆಗೆಯಲಾಯಿತು ಎಂದರೆ ಅದು ನನಗೆ ಗೊತ್ತಿಲ್ಲ.

13. ಈಗ ನನಗೆ ಜಿಲ್ಲಾಧಿಕಾರಿಗಳು ನೀಡಿರುವ ಆದೇಶದ ನೋಟೀಸನ್ನು ತೋರಿಸುತ್ತಿದ್ದು, ಅದನ್ನು ನನ್ನ ತಂದೆಗೆ ನೀಡಲಾಗಿದೆ ಎಂದರೆ ನಿಜ. ಸದರಿ ದಾಖಲಾತಿಯನ್ನು ಸಾಕ್ಷಿಯು ನೋಡಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಜಿಲ್ಲಾಧಿಕಾರಿಗಳು ಮಾಡಿರುವ ಆದೇಶವನ್ನು

ನಮ್ಮ ತಂದೆ ಪ್ರಶ್ನಿಸಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ಇಲ್ಲಿಯತನಕ ನಾನಾಗಲಿ, ನನ್ನ ತಂದೆಯಾಗಲಿ ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಅಪೀಲನ್ನು ಅಥವಾ ಮೇಲ್ಮನವಿಯನ್ನು ದಾಖಲು ಮಾಡಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ಅಬ್ದುಲ್ ಕರಿಂ ರವರು 1994 ರಲ್ಲಿ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ತದ ನಂತರ ಈ ಕೇಸಿನ 2 ಮತ್ತು 3 ನೇ ಪ್ರತಿವಾದಿಗಳು ವರದಿಯನ್ನು ಕೊಟ್ಟು ಅಬ್ದುಲ್ ಕರಿಂ ರವರ ಹೆಸರನ್ನು ತೆಗೆಯಿಸಿ ತಮ್ಮ ಹೆಸರನ್ನು ದಾಖಲು ಮಾಡಿಸಿಕೊಂಡರು ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ದಿಃ 10.04.1995 ರಂದು ಅನುಮೋದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳ ಆದೇಶ ನಮ್ಮ ತಂದೆಗೆ ಗೊತ್ತಿತ್ತು ಅಥವಾ ಇಲ್ಲವೆಂದು ನನಗೆ ಮಾಹಿತಿ ಇರುವುದಿಲ್ಲ. ನಮ್ಮ ತಂದೆಯು ತಮ್ಮ ಹೆಸರು ಕಂದಾಯ ದಾಖಲಾತಿಗಳಲ್ಲಿ ಇದೆಯೋ ಅಥವಾ ಇಲ್ಲವೆಂದು ಪರಿಶೀಲನೆ ಮಾಡಿರುವುದಿಲ್ಲ. ಕಾಲ ಪರಿಮಿತಿ ಬಾಹಿರ ಆದ ಕಾರಣ ಮುಟೇಷನ್ ದಾಖಲಾತಿಗಳು ಅಂತಿಮಗೊಂಡಿರುವ ಕಾರಣ ನಾವು ಸಲ್ಲಿಸಿರುವ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

14 ಅಮಿನಾಬಿ ಮತ್ತು ಶರಿಫಾಬಿ ತೀರಿಕೊಂಡಿದ್ದು, ಅವರ ವಾರಸುದಾರರು ಇಗಲೂ ಇದ್ದಾರೆ ಎಂದರೆ ನಿಜ. ಹವಾಬಿ ಇಗಲೂ ಸಹಾ ಇದ್ದಾರೆ ಎಂದರೆ ನಿಜ. ಅವರ ವರಾಸುದಾರರನ್ನು ಈ ದಾವೆಯಲ್ಲಿ ಸೇರಿಸದ ಕಾರಣ ದಾವೆಯು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.